# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

## ದಿನಾಂಕಃ22.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ಸಿ.ಕೆ.ನಾಗಪ್ಪ ಬಿನ್ ಲೇ.ಕಾಡಯ್ಯ<br>46 ವರ್ಷ<br>ವ್ಯವಸಾಯ<br>ಚೇಳೂರು |
| | ಸತ್ಯ ಪ್ರತಿಜ್ಞೆಯ **ಮೇರೆಗೆ** |

## ಮುಂದುವರಿದ ಪಾಟೀ ಸವಾಲುಃ- ಪ್ರತಿ ವಾದಿ ಗಳ ಪರ ವಕೀಲರಾದ ಶ್ರೀ. ಸಿ.ಎಸ್.ಎ.ರವರಿಂದ

7. ನಂಜಪ್ಪನ ಮಕ್ಕಳಾದ ಸಿದ್ದಯ್ಯ, ಆನಂದಯ್ಯ ಹಾಗೂ ಸಿದ್ದನಂಜಯ್ಯ ಯಾವಾಗ ಮೃತಪಟ್ಟರು ಎಂದು ನನಗೆ ಹೇಳಲು ಬರುವುದಿಲ್ಲ . ದಾವಾಸ್ವತ್ತಿನ ಹಳೆಯ ಸ.ನಂಃ 200/1 ಎಂದರೆ ಸರಿ. ಸ.ನಂಃ200/1 ರ ಒಟ್ಟು ವಿಸ್ತೀರ್ಣ 3 ಎಕರೆ 29 ಗುಂಟೆ ಎಂದರೆ ಸರಿ . ಸ.ನಂಃ200/1 ರ ಒಟ್ಟು ವಿಸ್ತೀರ್ಣ 3 ಎಕರೆ 29 ಗುಂಟೆ ಜಮೀನು ಮೂಲತಃ ಬೆಟ್ಟಪ್ಪನವರಿಗೆ ಸೇರಿದ್ದುಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅದರಲ್ಲಿ ನಾರಾಯಣಮ್ಮನಿಗೆ 1 ಎಕರೆ 10 ಗುಂಟೆ ಇತ್ತು ಎನ್ನುತ್ತಾರೆ . ಆ ರೀತಿ ನಾರಾಯಣಮ್ಮನಿಗೆ ಸ.ನಂಃ200/1 ರಲ್ಲಿ 1 ಎಕರೆ 10 ಗುಂಟೆ ಜಮೀನು ಇತ್ತುಎಂದು ಹೇಳಲು ನೀವೇನಾದರೂ ದಾಖಲೆ ನೋಡಿದ್ದೀರಾ ಎಂದರೆ ಸಾಕ್ಷಿಯು ದಾಖಲೆಕೊಟ್ಟಿದ್ದೇನೆಎನ್ನುತ್ತಾರೆ. ನನಗೆ ಕನ್ನಡ ಭಾಷೆ ಓದಲು, ಬರೆಯಲು ಬರುತ್ತದೆ ಎಂದರೆ ಸರಿ . ನಾನು ಹಾಜರುಪಡಿಸಿರುವ ನಿ.ಪಿ.2 ರಿಂದ ನಿ.ಪಿ.5 ದಾಖಲೆಗಳಲ್ಲಿ ನಾರಾಯಣಮ್ಮನ ಹೆಸರು ಇಲ್ಲ ಎಂದರೆ ಸರಿ . ನಾರಾಯಣಮ್ಮನಿಗೆ ಸ.ನಂಃ200/1 ರಲ್ಲಿ 3 ಎಕರೆ 29 ಗುಂಟೆ ಜಮೀನಿನಲ್ಲಿ ಯಾವುದೇ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ .

8. 1971 ರಲ್ಲಿ ನಾರಾಯಣಮ್ಮ ವಾದಿಯ ತಂದೆ ಕರಿಯಪ್ಪನಿಗೆ ಬರೆದುಕೊಟ್ಟಿರುವ ಕ್ರಯಪತ್ರ ಸೃಷ್ಟಿತ ದಾಖಲೆ ಯಾಗಿದ್ದು ಆ ರೀತಿ ಕ್ರಯಪತ್ರ ಬರೆದುಕೊಡಲು ನಾರಾಯಣಮ್ಮನಿಗೆ ಸ.ನಂಃ 200/1 ಜಮೀನಿನಲ್ಲಿ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಾರಾಯಣಮ್ಮ ನಿಗೆ ದಾವಾಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲದೇ ಇರುವುದರಿಂದ ಕರಿಯಪ್ಪನಿಗೂ ಸಹ ದಾವಾಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲ ಹಾಗೂ ಅದನ್ನು ವಾದಿಗೆ ಭಾಗ ಮಾಡಿಕೊಡಲು ಕರಿಯಪ್ಪನಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

9. ಕರಿಯಪ್ಪನವರು ದಿಃ 08-05-1971 ರಂದು ಕ್ರಯಪತ್ರ ಬರೆಸಿಕೊಳ್ಳುವಾಗ ದಾವಾ ಸ.ನಂಃ ಬಾಬ್ತು ಹಾಗೂ ದಾವಾಸ್ವತ್ತಿನ ಬಾಬ್ತು ಹಿಂದಿನ ದಾಖಲೆಗಳನ್ನು ಪರಿಶೀಲನೆ ಮಾಡಿದ್ರಾ ಎಂದರೆ ಸಾಕ್ಷಿಯ ನನಗೆ ಗೊತ್ತಿಲ್ಲ ಎನ್ನುತ್ತಾರೆ . ಪ್ರತಿವಾದಿಗಳಿಗೆ ಮೋಸಮಾಡಬೇಕೆಂಬ ಏಕೈಕ ಉದ್ದೇಶದಿಂದ ದಿಃ08-05-1971 ರ ಕ್ರಯಪತ್ರವನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ . ಕರಿಯಪ್ಪ ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಎಂ.ಆರ್.11/71-72 ಅನ್ನು ಸೃಷ್ಟಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನಿ.ಪಿ .6 ಕೂಡ ಸೃಷ್ಟಿತ ದಾಖಲೆಯಾಗಿದ್ದು ದಾವಾಸ್ವತ್ತು ನನ್ನ ತಾಯಿಯ ಹೆಸರಿಗೆ ಬಂದಿಲ್ಲ ಎಂದರೆ ಸರಿಯಲ್ಲ. ನಿ.ಪಿ.7 ಕೂಡ ಸೃಷ್ಟಿ ಮಾಡಿರುವ ದಾಖಲೆಯಾಗಿದ್ದು ಪ್ರತಿವಾದಿಗಳು ಯಾವುದೇ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತುಗಳು ಪ್ರತಿವಾದಿಗೆ ಸೇರಿದ ಸ್ವತ್ತಾಗಿದ್ದುಅದನ್ನು ಕಬಳಿಸುವ ದುರುದ್ದೇಶದಿಂದ ನಿ.ಪಿ.2 ರಿಂದ 7 ದಾಖಲೆಗಳನ್ನು ಸೃಷ್ಟಿಮಾಡಿಕೊಂಡು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ .**

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ.